ಓ.ಎಸ್.ನಂ: 112-2016 ಪಿಡಬ್ಲುಃ-1.

ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 06-04-2018

ಪಾಟೀ ಸವಾಲು : 7 ರಿಂದ 13 ನೇ ಪ್ರತಿವಾದಿ ಪರಃ ಶ್ರೀ ಟಿ. ಎಸ್.ಎಚ್.ವಕೀಲರಿಂದಃ

ನನ್ನ ಹಾಗೂ ಪ್ರತಿವಾದಿಯರ ಮೂಲ ಪುರುಷ ಚನ್ನಬಸನಗೌಡ ಎಂದರೆ ಸರಿ. ಸದರಿ ಚನ್ನಬಸನಗೌಡ ಮತ್ತು ಆತನ ಹೆಂಡತಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಮೂಲ ಪುರುಷ ಚನ್ನಬಸನಗೌಡನಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು ಎಂದರೆ ಸರಿ. ವಾದಿ ತನ್ನ ದಾವೆಯ ಜೊತೆಗೆ ನೀಡಿದ ವಂಶಾವಳಿ ಸರಿ ಇರುತ್ತದೆ ಎಂದರೆ ಸರಿ. ನಾನು ಮತ್ತು ಉಳಿದ ಪ್ರತಿವಾದಿಯರು ಮೂಲತಃ ಹಿರೇಕೆರೂರ ತಾಲೂಕ ಚಿಕ್ಕಬೂದಿಹಾಳ ಗ್ರಾಮದವರು ಎಂದರೆ ಸರಿ. ನಮಗೆ ಬ್ಯಾಡಗಿ ತಾಲೂಕ ಹಾಗೂ ಹಿರೇಕೆರೂರ ತಾಲೂಕಿನಲ್ಲಿ ಏಕತ್ರ ಘರಾಣೆದ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಮತ್ತು ವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಇದುವರೆಗೆ ನಮ್ಮ ನಡುವೆ ಹಿಸ್ಸೆ ಆಗಿಲ್ಲಾ ಎಂದರೆ ಸರಿ. ಮೂಲಪುರುಷನ ಎರಡನೆ ಮಗ ನಂದೆಪ್ಪಗೌಡ ಇವನು ಮೃತಪಟ್ಟಿರುತ್ತಾನೆ ಎಂದರೆ ಸರಿ. ಮೃತ ನಂದೆಪ್ಪಗೌಡ ಜೀವಂತ ಇರುವಾಗ ಅಥವಾ ಅವನು ಮೃತಪಟ್ಟ ನಂತರ ದಾವಾ ಆಸ್ತಿಗಳಿಗೆ ಯಾವುದೆ ಹಿಸ್ಸೆ ಆಗಿರುವದಿಲ್ಲಾ ಎಂದರೆ ಸರಿ. ನಂದಪ್ಪಗೌಡ ತನ್ನ ಜೀವಿತ ಕಾಲದಲ್ಲಿ ಚಿಕ್ಕಬೂದಿಹಾಳ ಗ್ರಾಮ ಬಿಟ್ಟು ಬಂದು ಬ್ಯಾಡಗಿ ತಾಲೂಕ ಸೂಡಂಬಿಯಲ್ಲಿ ವಾಸಿಸುತ್ತಿದ್ದನು ಎಂದರೆ ಸರಿ. ದಾವಾ ಆಸ್ತಿಗಳನ್ನು ಮೃತ ನಂದೆಪ್ಪ ಗೌಡ ಇವನು ಏಕತ್ರ ಘರಾಣೆದ ಪರವಾಗಿ ದಿಃ 04-05-1962 ರಂದು 1000 ರೂಪಾಯಿಗಳಿಗೆ ಖರೀದಿಗೆ ಪಡೆದಿರುತ್ತಾನೆ ಎಂದರೆ ಸರಿ. ಇದುವರೆಗೂ ಶೆಡ್ಯೂಲ್ ಸ್ವತ್ತುಗಳು ನಮ್ಮ ಮತ್ತು ಪ್ರತಿವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುತ್ತವೆ ಎಂದರೆ ಸರಿ.

ದಾವಾ ಸ್ವತ್ತುಗಳು ನಮ್ಮೆಲ್ಲರ ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿ ಇದ್ದರೂ ಸಹ ಪ್ರತಿವಾದಿ 1 ಮತ್ತು 6 ನೇ ದವರು ಗೈರು ಕಾಯ್ದೇಶಿರ ತಮ್ಮ ಹೆಸರನ್ನು ಪಹಣಿ ಪತ್ರಿಕೆಗಳಿಗೆ ಹಚ್ಚಿಕೊಂಡಿದ್ದಾರೆ ಎಂದರೆ ಸರಿ.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃಶ್ರೀ ಎಸ್.ವಿ.ಎಚ್. ವಕೀಲರಿಂದಃ

1 ರಿಂದ 6 ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ಸಲ್ಲಿಸಿರುವದಿಲ್ಲಾ ಆದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು) ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.